ಅಧ್ಯಕ್ಷರಾದಾಗ ಅವರ ಜೊತೆಗೆ ಒಂದು ತಿಂಗಳು ಕಾಲ, ಬೆಂಗಳೂರಿನ ಸ್ಟೂಡೆಂಟ್ ಹಾಸ್ಟೆಲಿನ ಅವರು ವಾಸಿಸುತ್ತಿದ್ದ ರೂಮಿನಲ್ಲಿ ಇದ್ದೆ. ಆ ಕಾಲ ನನಗೆ ಸುಗ್ಗಿಯ ಕಾಲ. ಕಾಳೇಗೌಡರು, ಚಂಪಾ, ಎಚ್.ಎಸ್. ಶಿವಪ್ರಕಾಶರಂತಹ ಘಟಾನುಘಟಿಗಳು ಅಲ್ಲಿಗೆ ಬಂದುಹೋಗುತ್ತಿದ್ದರು. ಆಗಾಗ ಗಜಲ್ ಕಾವ್ಯಗೋಷ್ಠಿಗಳು ನಡೆಯುತ್ತಿದ್ದವು. ಆ ಗೋಷ್ಠಿಗಳು ಬಹು ಸ್ವಾರಸ್ಯಕರವಾಗಿದ್ದವು. ಒಂದು ಗಜಲ್ ಗೋಷ್ಠಿಯ ನೆನಪು ಈಗಲೂ ಕಚಗುಳಿ ಇಡುವಂತಿದೆ. ಅದು ಎಸ್. ಬಸವಾರಾಧ್ಯರ ಮನೆಯಲ್ಲಿ ನಡೆದ ಗೋಷ್ಠಿ. ಅಲ್ಲಿ ಸೇರಿದವರೆಲ್ಲರೂ ಶಾಂತರಸರ ವಯಸ್ಸಿನವರೇ. ಅವರಲ್ಲಿ ದೇವೇಂದ್ರ ಕುಮಾರ ಹಕಾರಿಯವರು ಒಬ್ಬರು. ಹಕಾರಿಯವರು ಇದ್ದರೆ, ಶಾಂತರಸರಿಗೆ ಒಂದು ರೀತಿಯ ನಗೆಹಬ್ಬದ ಉಮೇದು. ಹಿಂದಿ-ಕನ್ನಡ ಗಜಲ್‌ಗಳನ್ನು ಹೇಳುವುದು, ಅದರ ಅರ್ಥವನ್ನು ಚರ್ಚಿಸುವುದು, ವ್ಹಾವ್ ವ್ಹಾವ್ ಎಂದು ಹೇಳುವದು, ಅದು ಹಾಗಲ್ಲ ಹೀಗೆ ಎಂದು ವಾದಿಸುವುದು - ಹೀಗೆ ಗೋಷ್ಠಿ ನಡೆಯುತ್ತಿತ್ತು. ಪ್ರತಿ ಗಜಲ್ ವಾಚನದ ನಂತರ ಎಲ್ಲರೂ ವ್ಹಾವ್ ವ್ಹಾವ್ 'ಫ್ಲೈಯಿಂಗ್ ಕಿಸ್' ಕೊಡುತ್ತಿದ್ದರು. ನನಗೆ ಇದು ತಮಾಷೆ ಅನ್ನಿಸುತ್ತಿತ್ತು. ಈ ಅಜ್ಜಗಳು ಹೀಗೇಕೆ ಮಾಡುತ್ತಾರೆ ಎಂದು ನಗು ಬರುತ್ತಿತ್ತು. ಆದರೆ ಅದು ಗಜಲ್ ರಸಾಸ್ವಾದನೆಯ ಪ್ರತಿಕ್ರಿಯೆ ಎನ್ನುವುದು ನಂತರ ತಿಳಿಯಿತು.

ಶಾಂತರಸರು ಸಹೃದಯಿ ರಸಿಕರಾಗಿದ್ದರು. ಎಪ್ಪತ್ತರ ವಯಸ್ಸಿನಲ್ಲೂ ಕೂಡ, ಇತ್ತಿತ್ತಲಾಗಿ ಗೋಷ್ಠಿಗಳೇ ನಡೆಯುತ್ತಿಲ್ಲ ಎನ್ನುವ ಗಜಲ್ ಬರೆಯಲು ಅವರಿಗೆ ಸಾಧ್ಯವಾಯಿತು. ಆ ಗಜಲ್ ಬಹು ಸ್ವಾರಸ್ಯಕರವಾಗಿದೆ. ಅಲ್ಲಿ ದಿನಾಲು ಗಜಲ್ ಗೋಷ್ಠಿಗಳು ನಡೆಯುತ್ತಿತ್ತು, ಆದರೆ ಇತ್ತಿತ್ತಲಾಗಿ ನಡೆಯುತ್ತಿಲ್ಲ. ಏಕೆಂದರೆ ಒಬ್ಬ ಸುಂದರಿ ಊರಿಗೆ ಬಂದಿದ್ದಾಳೆ. ಅವಳೆಂತಹ ಸುಂದರಿ ಎಂದರೆ, ಅವಳು ಬಂದ ಮೇಲೆ ಚಂದಿರನು ಬಾನಿನಲ್ಲಿ ಇಲ್ಲ. ಅವಳು ಚಂದಿರನ ಸ್ವರೂಪದವಳಾಗಿದ್ದಾಳೆ. ಗೋಷ್ಠಿಯ ರಸಿಕರು ಅವಳ ಬೆನ್ನು ಬಿದ್ದಿದ್ದಾರೆ. ಹಾಗಾಗಿ ಗೋಷ್ಠಿಗಳು ನಡೆಯುತ್ತಿಲ್ಲ. ಇಂಥ ಸುಂದರ ರಚನೆಗಳು ಯಾರಿಗೆ ಸೇರುವುದಿಲ್ಲ?

ನನಗೆ ನನ್ನ ಅಣ್ಣ ಸ್ವಾಮಿಯವರು ತೀರಿಕೊಂಡ ನಂತರ ಶಾಂತರಸರ ಜೊತೆ ಕೆಲ ಕಾಲ ಸಂಪರ್ಕ ಕಡಿತಗೊಂಡಿತ್ತು. ಅವರು ಬಹಳ ದಿನಗಳ ಕಾಲ ಗದಗದಲ್ಲಿ ಇದ್ದರು. ಮತ್ತೆ ಗದಗದಿಂದ ಕಲಬುರ್ಗಿಗೆ ಅವರ ಮಗ ಬಸವಪ್ರಭು ಅವರ ಮನೆಗೆ ಬಂದರು. ಆಗ ಮತ್ತೆ ಶಾಂತರಸರ ಜೊತೆ ಸಂಪರ್ಕ ಶುರುವಾಯಿತು. ಸಂಜೆ ಆಫೀಸ್ ಮುಗಿದ ನಂತರ ನಾನು ದಿನಾಲು ಅವರ ಮನೆಗೆ ಹೋಗುತ್ತಿದ್ದೆ. ನನ್ನ ಕಥೆಗಳನ್ನು ಅವರ ಮುಂದೆ ಓದುವುದು, ಅವರು ತಿದ್ದುವದು, ಅವರು ಹೊಸದಾಗಿ ಬರೆದ ಗಜಲ್‌ಗಳನ್ನು ನನ್ನ ಮುಂದೆ ಓದುವುದು - ಇದು ನಿರಂತರವಾಗಿ ನಡೆಯಿತು. ಆ ಸಂದರ್ಭದಲ್ಲಿ ಅವರಿಗೆ ಹಂಪಿ ವಿಶ್ವವಿದ್ಯಾಲಯ 'ನಾಡೋಜ' ಗೌರವ ನೀಡಿ ಪುರಸ್ಕರಿಸಿತು. ಅವರ ಸಾಹಿತ್ಯ, ಸಂಸ್ಕೃತಿ, ಸಂಶೋಧನೆಗೆ ತಡವಾಗಿ ದಕ್ಕಿದ ಗೌರವ ಅದಾಗಿತ್ತು. ಆಗ ಕಲಬುರ್ಗಿ ಮೂಲದ ಹಂಪಿ ವಿ.ವಿ. ಪ್ರಾಧ್ಯಾಪಕರೊಬ್ಬರು ಶಾಂತರಸರಲ್ಲಿಗೆ ಬಂದು, 'ಸರ್, ನಾನೇ ನಿಮಗೆ ನಾಡೋಜ ಬರಲು ಕಾರಣಕರ್ತ' ಎಂದು ಹೇಳಿದರು. ಶಾಂತರಸರು ಕೆಂಡಾಮಂಡಲರಾದರು. ಒಮ್ಮಿಂದೊಮ್ಮೆಲೆ 'ಈಗಲೇ ನಾನು ಇದನ್ನು ವಾಪಸ್ಸು ಮಾಡುತ್ತೇನೆ' ಎಂದು ವಿ.ಸಿ.ಯವರಿಗೆ ಫೋನ್ ಮಾಡಲು ತಯಾರಾದರು. ಆತ ಕ್ಷಮೆ ಕೇಳಿದರು. 'ನಾನು ಶಿಫಾರಸ್ಸು ಮಾಡಿಲ್ಲ. ಕ್ಷಮಿಸಿ' ಎಂದವರು ಹೇಳಿದ ಮೇಲೆಯೇ ಶಾಂತರಸರು ತಣ್ಣಗಾಗಿದ್ದು. ಮತ್ತೊಂದು ದಿನ ಅದೇ ಪ್ರೊಫೆಸರ್ ಸಾಹೇಬರು ಶಾಂತರಸರ ಮನೆಗೆ ಬಂದಾಗ ನಾನು ಅಲ್ಲೇ ಕುಳಿತಿದ್ದೆ. 'ದಯವಿಟ್ಟು ನೀವು ಒಳಗೆ ಬರುವುದು ಬೇಡ. ನಾನು ಮಹಾಂತಪ್ಪನ (ನನಗೆ ಹಾಗೆ ಕರೆಯುತ್ತಿದ್ದರು) ಜೊತೆ ಸ್ವಲ್ಪ ಚರ್ಚಿಸುವುದಿದೆ' ಎಂದು ಹೊರಗೆ ಕಳುಹಿಸಿದರು. ಶಾಂತರಸರು ಸುಳ್ಳು ಹೇಳುವವರನ್ನು ಹಾಗೂ ಬೆನ್ನಿಗೆ ಚೂರಿ ಹಾಕುವವರನ್ನು ಎಂದೂ ಕ್ಷಮಿಸುತ್ತಿರಲಿಲ್ಲ.

ಶಾಂತರಸರು ನನಗೆ ಗಜಲ್ ಬರೆಯಲು ಕಲಿಸಲು ಪ್ರಯತ್ನಪಟ್ಟರು. ಅವರ ಮತ್ತು ಎಚ್.ಎಸ್. ಮುಕ್ತಾಯಕ್ಕ ಅವರ ಗಜಲ್‌ನಲ್ಲಿ ಇರುವ ಉತ್ಕಟತೆ ನನಗೆ ನಿಲುಕದಾಯಿತು. ನಾನು ಗಜಲ್ ಪ್ರಕಾರದಲ್ಲಿ ಅಷ್ಟೇನೂ ತೊಡಗಿಸಿಕೊಳ್ಳದಿದ್ದರೂ ಕೆಲವನ್ನು ಬರೆದು ತೋರಿಸಿದೆ. ಆದರೆ ನನ್ನ ಕಥೆಗಳು ಅವರಿಗೆ ಬಹಳ ಪ್ರಿಯವಾಗಿದ್ದವು. 'ಮಯೂರ'ದಲ್ಲಿ ಪ್ರಕಟವಾದ